CC : 636/2025
ಪಿ-ಡಬ್ಲ್ಯೂ- 01

ದಿನಾಂಕಃ 06-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ

ನಿಮಗೆ ಆರೋಪಿ ಹೇಗೆ ಪರಿಚಯ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆಟೋ ರಿಕ್ಷಾ ಇದೆ ಮತ್ತು ಟೂರಿಸ್ಟ್ ವಾಹನ ಇರುತ್ತದೆ ಆ ಮೂಲಕ ಪರಿಚಯ ಇರುತ್ತದೆ . ಆರೋಪಿ ಮನೆ ಕಡೆಕಾರ್ ನಲ್ಲಿ ಇರುತ್ತದೆ . ಆರೋಪಿಯ ವೈಯಕ್ತಿಕ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಆಕೆಯ ವೈಯಕ್ತಿಕ ಪರಿಚಯ ಇಲ್ಲ . ನನಗೆ ಆರೋಪಿ 3-4 ವರ್ಷ ದಿಂದ ಪರಿಚಯಸ್ಥರು . ಶಶಿಕಾಂತ್ ಬಂಗೇರ ರವರ ಪರಿಚಯ ಇಲ್ಲ . ನನ್ನ ಮೊಬೈಲ್ ನಂ 8861476959. ನನ್ನ ಮೊಬೈಲ್ ನಂಬರ್ ಗೆ ಶಶಿಕಾಂತ್ ಬಂಗೇರ ರವರಿಂದ ಕರೆ ಬಂದಿಲ್ಲ . ಈ ದಿನ ಕೂಡ ಶಶಿಕಾಂತ್ ಬಂಗೇರ ರವರ ಬಳಿ ಕರೆ ಮಾಡಿ ಮಾತನಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಇರುವ ಬರವಣಿಗೆ ಯನ್ನು ಆರೋಪಿಯೇ ಬರೆದು ತಂದಿದ್ದರು. ಸಿಸಿ ನಂ. 634/2025 ರಲ್ಲಿ ಹಾಜರುಪಡಿಸಿದ ನಿಪಿ-1 ಮತ್ತು ಈ ಪ್ರಕರಣದ ನಿಪಿ 1 ರಲ್ಲಿ ಇರುವ ಹಸ್ತಾಕ್ಷರಗಳು ಒಬ್ಬ ವ್ಯಕ್ತಿಯ ಬರವಣಿಗೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ . ಈ 2 ಪ್ರಕರಣದ ಚೆಕ್ ಗಳನ್ನು ತಜ್ಞರ ಪರಿಶೀಲನೆಗೆ ಕಳುಹಿಸಲು ನನ್ನ ತಕರಾರು ಇಲ್ಲ ಎಂದರೆ ಸರಿ . ನಾನು ಈ ಪ್ರಕರಣದ 2 ಚೆಕ್ ಗಳನ್ನು ನಾನು ಮತ್ತು ಶಶಿಕಾಂತ್ ಬಂಗೇರ ರವರು ಸೇರಿಕೊಂಡು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ .

ಶಶಿಕಾಂತ್ ಬಂಗೇರ ಮತ್ತು ನನ್ನ ಮೊಬೈಲ್ ನಂಬರ್ ನ ಕರೆ ವಿವರಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ . ಸರೋಜ ರವರ ಪರಿಚಯ ಇಲ್ಲ. ದಮಯಂತಿ ರವರ ಪರಿಚಯ ಕೂಡ ಇಲ್ಲ . ದೊಡ್ಡ ಮೊತ್ತದ ಹಣವನ್ನು ಕೊಡುವಾಗ ದಾಖಲೆಗಳನ್ನು ಮಾಡಿಕೊಳ್ಳಬೇಕು ಎಂಬ ಬಗ್ಗೆ ಜ್ಞಾನ ನನಗೆ ಇಲ್ಲ . ನಾನು ನಮ್ಮ ಸಂಘದಲ್ಲಿ ಸಾಲ ಪಡೆದು ಆರೋಪಿಗೆ ಹಣ ನೀಡಿರುತ್ತೇನೆ . ನಾನು ಧರ್ಮಸ್ಥಳ ಸಂಘದಲ್ಲಿ ರೂ 3,00,000 ಸಾಲ ಪಡೆದಿರುತ್ತೇನೆ . ಸಾಲ ಪಡೆದ ದಿನಾಂಕ ನೆನಪಿಲ್ಲ. ಆರೋಪಿಗೆ ಕೊಟ್ಟ ಸಾಲದ ದಿನಾಂಕದಿಂದ ಎಷ್ಟು ದಿನ ಮೊದಲು ಸಾಲ ಪಡೆದೆ ಎಂದು ನೆನಪಿಲ್ಲ. ಸಾಲ ಪಡೆದ ಹಣ ನನ್ನ ಬಳಿ ಒಂದು ತಿಂಗಳ ವರೆಗೆ ಇತ್ತು .ನಾನು ಸಾಲ ಪಡೆದು ನನ್ನ ಚಿನ್ನವನ್ನು

ಬಿಡಿಸಿಕೊಂಡೆ ನಂತರ ಆರೋಪಿ ಕೇಳಿದಾಗ ಪುನಃ ಚಿನ್ನವನ್ನು ಅಡಮಾಣ ಮಾಡಿ ಆರೋಪಿಗೆ ಹಣ ಕೊಟ್ಟಿರುತ್ತೇನೆ. ನಾನು ಜುಲೈ ನಲ್ಲಿ ಚಿನ್ನವನ್ನು ಅಡಮಾಣ ಮಾಡಿ ಆ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ. ನಾನು ಬ್ಯಾಂಕ್ ಆಫ್ ಬರೋಡಾದಿಂದ ಚಿನ್ನವನ್ನು ಅಡಮಾಣ ಮಾಡಿ ಸಾಲ ಪಡೆದಿರುತ್ತೇನೆ . ನಾನು ಸಂದೀಪ್ ಎನ್ನುವ ಸ್ನೇಹಿತನ ಹೆಸರಿನಲ್ಲಿ ನನ್ನ ಚಿನ್ನವನ್ನು ಗಿರವಿ ಇಡಿಸಿರುತ್ತೇನೆ. ಆತ ಯಾವ ಬ್ಯಾಂಕ್ ನಲ್ಲಿ ಇಟ್ಟ ಎಂದು ನನಗೆ ಗೊತ್ತಿಲ್ಲ . ನಾವು ರೂ 1,50,000 ಹಣ ಸಾಲವನ್ನು ಚಿನ್ನ ಗಿರವಿ ಇಟ್ಟು ಪಡೆದಿರುತ್ತೇವೆ. ಆ ಚಿನ್ನವನ್ನು ಇನ್ನೂ ಕೂಡ ಬಿಡಿಸಿಕೊಂಡಿಲ್ಲ . ಸಂದೀಪ್ ನ್ನು ಯಾವ ಬ್ಯಾಂಕ್ ನಲ್ಲಿ ಇಟ್ಟಿದ್ದಿಯಾ ಎಂದು ಕೇಳಿಲ್ಲ . ಸಂದೀಪ್ ನ್ನು ನ್ಯಾಯಲಯಕ್ಕೆ ಕರೆಯಿಸಿ ಸಾಕ್ಷ್ಯ ವಿಚಾರಣೆ ಮಾಡಲು ತೊಂದರೆ ಇಲ್ಲ . ನಾನು ಚೈನ್ ನ್ನು ಗಿರವಿ ಇಟ್ಟಿರುತ್ತೇನೆ . ಸಂದೀಪ್ ನಿಗೂ ಕೂಡ ಚೈನ್ ನ್ನು ಕೊಟ್ಟಿದ್ದೆ .

ನನಗೆ ಒಟ್ಟು ರೂ 13 ಲಕ್ಷ ಸಾಲ ಇರುತ್ತದೆ . ನಾನು ಆದಾಯ ತೆರಿಗೆ ಪಾವತಿದಾರನಲ್ಲ . ನನಗೆ ರೂ 13 ಲಕ್ಷ ಸಾಲ 5 ವರ್ಷಗಳಿಕ್ಕಿಂತ ಜಾಸ್ತಿ ವರ್ಷಗಳಿಂದ ಇದೆ . ಸಾಕ್ಷಿ ಮುಂದುವರಿದು ಆಗಾಗ್ಗೆ ತೆಗೆದುಕೊಳ್ಳುತ್ತೇನೆ ಕಟ್ಟುತ್ತೇನೆ. ಯಾವುದಾದರೂ ವ್ಯಕ್ತಿ ಸಾಲದಲ್ಲಿ ಇದ್ದರೇ ಮತ್ತೊಬ್ಬರಿಗೆ ಸಾಲ ಕೊಡುವ ಪ್ರಮೇಯ ಇರುವುದಿಲ್ಲ ಎಂದರೆ ಸರಿ . ಪ್ರಸ್ತುತ ಚೆಕ್ 1.5 ತಿಂಗಳ ಕಾಲ ನನ್ನ ಬಳಿ ಇತ್ತು. ಆರೋಪಿಯನ್ನು ಕೊನೆಯ ಬಾರಿಗೆ ಆರೋಪಿ ನನಗೆ ಚೆಕ್ ಕೊಟ್ಟಾಗ ನೋಡಿರುತ್ತೇನೆ. 1.5 ತಿಂಗಳ ಕಾಲ ಚೆಕ್ ನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳಲು ಕಾರಣ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಆರೋಪಿ ಹಣ ಕೊಡುವುದಾಗಿ ಹೇಳಿದ್ದರು ಆದ್ದರಿಂದ ಇಟ್ಟುಕೊಂಡಿದ್ದೆ. ಆರೋಪಿ ನನಗೆ ಚೆಕ್ ಹಾಕಿಕೊಳ್ಳಿ ಎಂದು ಹೇಳಿಲ್ಲ ಆದರೇ ಅವರು ನನ್ನ ಕರೆಯನ್ನು ಸ್ವೀಕರಿಸಿಲ್ಲ. ಈ ಎಲ್ಲಾ ವಿಚಾರವನ್ನು ನಾನು ಕೇಸು ಹಾಕುವಾಗ ನಮ್ಮ ವಕೀಲರಿಗೆ ಹೇಳಿರುತ್ತೇನೆ. ನನ್ನ ವಿರುದ್ಧ ಒಟ್ಟು 3 ಪ್ರಕರಣಗಳು ಇದ್ದವು . ಈಗ ಈ ಒಂದು ಪ್ರಕರಣ ಮತ್ತು ಅಪಘಾತಪಡಿಸಿದ ಮತ್ತೊಂದು ಪ್ರಕರಣ ಬಾಕಿ ಇದೆ. ಮತ್ತೊಂದು ಪ್ರಕರಣ ನನ್ನ ಸ್ನೇಹಿತರ ಜೊತೆ ಜಗಳದ ಪ್ರಕರಣ ಇತ್ತು ಅದು ರಾಜಿ ಆಗಿದೆ. ನಾನು ಆರೋಪಿಯ ಮನೆಗೆ ಹೋಗಿ ಭೇಟಿ ಆಗಿಲ್ಲ . ಆರೋಪಿ ಏನೂ ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಮೊಬೈಲ್ ಸಂಖ್ಯೆ ಗೊತ್ತಿಲ್ಲ, ಆದರೇ ಆಕೆಯ ಮೊಬೈಲ್ ಸಂಖ್ಯೆ ನನ್ನ ಮೊಬೈಲ್ ನಲ್ಲಿ ಇದೆ . ನ್ಯಾಯಲಯದ ಅನುಮತಿ ಪಡೆದು ಸಾಕ್ಷಿ ತನ್ನ ಮೊಬೈಲ್ ನೋಡಿ ಅದರಲ್ಲಿ ಸೇವ್ ಆಗಿದ್ದ ಆರೋಪಿಯ ಮೊಬೈಲ್ ನೋಡಿ ಸದ್ರಿ ಸಂಖ್ಯೆ ತಿಳಿಸಿರುತ್ತಾರೆ ಅದು 8971565121 ಆಗಿರುತ್ತದೆ.

ಈಗ ನಾನು ಹೇಳಿದ ಮೊಬೈಲ್ ಸಂಖ್ಯೆ ಆರೋಪಿಯ ಮೊಬೈಲ್ ಸಂಖ್ಯೆ ಅಲ್ಲ ಎಂದರೆ ಸರಿಯಲ್ಲ. ಈ ಮೊಬೈಲ್ ಸಂಖ್ಯೆಗೆ ಕೊನೆಯ ಬಾರಿಗೆ ನಾನು ಆರೋಪಿ ಚೆಕ್ ಕೊಡುವ ಮೊದಲು ಕರೆ ಮಾಡಿದ್ದೆ .

ಮುಂದುವರಿದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು , ನೀಡಲಾಯಿತು

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.